## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮಡಿಕೇರಿ

**ಸಿ.ಸಿ.ನಂ. 185/2026**

ಪಿರ್ಯಾದಿಃ ರಾಜ್ಯದ ಪರವಾಗಿ
ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣೆ

ವಿರುದ್ಧ

ಆರೋಪಿ/ಗಳುಃ ರಾಜೇಶ್

**ಃ ದೋಷಾರೋಪಣೆ ಃ**

ಶ್ರೀಮತಿ ವಿನುತ ಡಿ.ಎಸ್. ಬಿ.ಎಸ್.ಸಿ. (ಸೆರಿಕಲ್ಚರ್), ಎಲ್.ಎಲ್.ಬಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ ಆದ ನಾನು ಆರೋಪಿಯಾದ

ರಾಜೇಶ್ ವಿ.ಸಿ.,
ತಂದೆಃ ಚಂದ್ರ ವಿ.ಕೆ.,
ಪ್ರಾಯ 26 ವರ್ಷ,
ವಾಸಃ ಹೊಸ್ಕೇರಿ ಗ್ರಾಮ,
ಮರಗೋಡು ಅಂಚೆ,
ಮಡಿಕೇರಿ ತಾಲ್ಲೂಕು.

ನಿಮ್ಮ ವಿರುದ್ಧ ರೂಪಿಸಿರುವ ದೋಷಾರೋಪಣೆ ಏನೆಂದರೆ,

ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣಾ ವ್ಯಾಪ್ತಿಗೆ ಸೇರಿದ ಹೊಸ್ಕೇರಿ ಗ್ರಾಮದಲ್ಲಿ ಚಾಸಾ-1 ಅನಿಲ್ ರವರ ಮಾವ ಮೋಹನ್ ರವರು ಮೃತಪಟ್ಟ ಬಗ್ಗೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾಯಲ್ಲಿ ಯು ಡಿ ಆರ್ ನಂಃ18/2025 ರಂತೆ ಪ್ರಕರಣ ದಾಖಲಾಗಿದ್ದು, ಈ ಸಂಬಂಧ ಆರೋಪಿಯ ತಂದೆ ಚಂದ್ರರವರು ಕೊಲೆ ಮಾಡಿರುವ ಬಗ್ಗೆ ಚಾಸಾ-1 ಮತ್ತು ಚಾಸಾ-2 ಶ್ರೀಮತಿ ಶಾಂತ ರವರು ಅನುಮಾನಗೊಂಡು ಹೆಚ್ಚಿನ ತನಿಖೆಯನ್ನು ಕೈಗೊಳ್ಳುವಂತೆ ಮಾನ್ಯ ಪೊಲೀಸ್ ಅಧೀಕ್ಷಕರು, ಮಡಿಕೇರಿ, ಕೊಡಗು ಜಿಲ್ಲೆ ರವರಿಗೆ ದಿನಾಂಕ 22.09.2025 ರಂದು ಚಾಸಾ-2 ಹಾಗೂ ಇವರ ಕುಟುಂಬದವರು ದೂರು ಅರ್ಜಿಯನ್ನು ಸಲ್ಲಿಸಿರುವ ವಿಚಾರದಲ್ಲಿ ಆರೋಪಿಯಾದ ನಿಮಗೆ ಚಾಸಾ-1 ರವರ ಮೇಲೆ ದ್ವೇಷ ಇದ್ದು ದಿನಾಂಕ **28.04.2025** ರಂದು ಸಂಜೆ **5.30** ಗಂಟೆಗೆ ಚಾಸಾ-1 ರವರು ಮರಗೋಡುನಿಂದ ತಮ್ಮ ಮನೆ ಕಡೆಗೆ ಹೋಗಲು ಪರೇರ ಬಿದ್ದಪ್ಪ ರವರ ಕಾಫಿ ತೋಟದ ಮುಂದಿನ ಮರಗೋಡು-ಸಿದ್ದಾಪುರ ಸಾರ್ವಜನಿಕ ತಾರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಗ್ರಾಮ ಪಂಚಾಯಿತಿಗೆ ಸೇರಿದ ಕೊಳವೆ ಬಾವಿ ಬಳಿ ಆರೋಪಿಯಾದ ನೀವು ನಿಮ್ಮ ಬಾಪ್ತು ಕೆಎ-12-ಎಸ್-2712ರ ಸ್ಕೂಟರಿನಲ್ಲಿ ಬಂದು ಚಾಸಾ-1 ರವರ ದಾರಿಯನ್ನು ತಡೆದು ಅವರು ಮುಂದೆ ಹೋಗದಂತೆ ಪ್ರತಿಬಂಧಿಸಿದ್ದು ಆ ಮೂಲಕ ಬಿ.ಎನ್.ಎಸ್. ಕಲಂ 126(2) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ ಅದೇ **24.09.2025** ಅದೇ ಸಂಜೆ **5.30** ಗಂಟೆಗೆ ಚಾಸಾ-1 ರವರು ಪರೇರ ಬಿದ್ದಪ್ಪ ರವರ ಕಾಫಿ ತೋಟದ ಮುಂದಿನ ಮರಗೋಡು-ಸಿದ್ದಾಪುರ ಸಾರ್ವಜನಿಕ ತಾರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ನೀವು ಚಾಸಾ-1 ರವರನ್ನು ಕುರಿತು 'ಸೂಳೆ ಮಗನೆ, ನನ್ನ ಅಪ್ಪನ ಮೇಲೆ ಪೊಲೀಸ್ ಅಧೀಕ್ಷಕರಿಗೆ ದೂರು ನೀಡುತ್ತೀರಾ' ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಅಲ್ಲದೇ ದಿನಾಂಕ **25.09.2025**ರಂದು ಸಂಜೆ **5.45** ಗಂಟೆಗೆ ಹೊಸ್ಕೇರಿ ಗ್ರಾಮದಲ್ಲಿರುವ ಹರೀಶ್ ರವರ ಅಂಗಡಿಯ ಬಳಿ ಆರೋಪಿಯಾದ ನೀವು ಚಾಸಾ-1 ರವರನ್ನು ಕುರಿತು 'ಸೂಳೆ ಮಗನೆ,' ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡಿದ್ದು ಆ ಮೂಲಕ

ಬಿ.ಎನ್.ಎಸ್. ಕಲಂ **352** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ದನಾಂಕ **24.09.2025** ರಂದು ಸಂಜೆ **5.30** ಗಂಟೆಗೆ ಚಾಸಾ-1 ರವರು ಪರೇರ ಬಿದ್ದಪ್ಪ ರವರ ಕಾಫಿ ತೋಟದ ಮುಂದಿನ ಮರಗೋಡು-ಸಿದ್ದಾಪುರ ಸಾರ್ವಜನಿಕ ತಾರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಆರೋಪಿಯಾದ ನೀವು ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಚಾಸಾ-1 ರವರನ್ನು ಕುರಿತು 'ನಮ್ಮ ವಿಷಯಕ್ಕೆ ಬಂದರೆ ಕೊಲೆ ಮಾಡುವುದಾಗಿ' ಎಂದು ಕೊಲೆ ಬೆದರಿಕೆ ಹಾಕಿದ್ದು ಅಲ್ಲದೇ ದಿನಾಂಕ **25.09.2025**ರಂದು ಸಂಜೆ **5.45** ಗಂಟೆಗೆ ಹೊಸ್ಕೇರಿ ಗ್ರಾಮದಲ್ಲಿರುವ ಹರೀಶ್ ರವರ ಅಂಗಡಿಯ ಬಳಿ ಆರೋಪಿಯಾದ ನೀವು ಚಾಸಾ-1 ರವರನ್ನು ಕುರಿತು 'ನನ್ನ ಅಪ್ಪನ ಮೇಲೆ ಪೊಲೀಸ್ ಅಧೀಕ್ಷಕರಿಗೆ ದೂರು ನೀಡುತ್ತೀರಾ, ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಕೊಲೆ ಬೆದರಿಕೆ ಹಾಕಿದ್ದು ಆ ಮೂಲಕ ಬಿ.ಎನ್.ಎಸ್. ಕಲಂ **351(2)** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ನಿಮ್ಮ ಕೈಯಿಂದ ಚಾಸಾ-1 ರವರ ಬಲ ಕಿವಿಯ ಬಳಿ ಹಾಗೂ ಎದೆಯ ಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವನುಂಟು ಮಾಡಿದ್ದು ಆ ಮೂಲಕ ಬಿ.ಎನ್.ಎಸ್. ಕಲಂ **115(2)** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಯು ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

2/6/26

ದಿನಾಂಕ **02.06.2026**

ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಮಡಿಕೇರಿ.